ರಾ ಗ – ಉ ದ ಯ ರಾ ಗ : ತಾ ಳ – ತ್ರಿ ಪು ಟ ತಾ ಳ

ಶ್ರೀಪಾದರಾಯರ ದಿವ್ಯ ಶ್ರೀಪಾದವ ಭಜಿಸುವೆ ।ಪ।

ವಾಗ್ವಜ್ರಗಳಿಂದ ಮಾಯಾವಾದಿಗಳೆಲ್ಲರ ಬಾಯ
ಬೀಗವನಿಕ್ಕಿ ಮುದ್ರಿಸಿದ ಬಿಂಕಗಳ ಬಿಡಿಸುವ ।೧।

ವ್ಯಾಸರಾಯರಿಗೆ ವಿದ್ಯಾಭ್ಯಾಸವ ಮಾಡಿಸುವ
ದಾಸರ ನಾಮಗಳಿಂದ ಲೇಸುಲೇಸೆಂದೆನಿಸಿಕೊಂಬ ।೨।

ಮಧ್ವಮತದಲ್ಲಿ ಪುಟ್ಟಿ ಮಾಯಾವಾದಿಗಳ ಕುಟ್ಟಿ
ಗೆದ್ದು ಮೆರೆದನು ದಿಟ್ಟ ಗುರುರಾಯ ಜಗಜಟ್ಟಿ ।೩।

ಸುವರ್ಣವರ್ಣತೀರ್ಥರ ಸುತ ಶ್ರೀಪಾದರಾಯರ
ಅವರ ನಾಮಗಳಿಂದ ಕಾವನಯ್ಯ ಕರುಣಾನಿಧಿ ।೪।

ವರದ ವೇಂಕಟೇಶನ್ನ ಒಲಿದು ಪೂಜಿಸುವನ
ಕರುಣದಿಂದ ಹಯವದನ ಸಲಹೋ ಯತಿರನ್ನ ।೫।

ರಾ ಗ – ಪ ಂ ತು ವ ರಾ ಳಿ : ತಾ ಳ – ತಿ ಶ್ರ ಛಾ ಪು

ನೆರೆನಂಬಿ ಪಡೆಯಿರೊ ಹಿತವ ನಮ್ಮ
ಗುರುವಾದ ಮಧ್ವಮುನಿ ಸಮ್ಮತವ ।ಪ।

ತ್ರೇತೆಯೊಳಂಜನಾ ತನಯನಾಗಿ
ಸೀತಾರಮಣ ರಘುನಾಥಗೆ ಪ್ರಿಯ
ದೂತತನದಿ ಖಳತತಿಯ ಕೊಂದು
ಖ್ಯಾತಿ ಪಡೆದ ಹನುಮನಾದ ಯತಿಯ ।೧।

ದ್ವಾಪರದಲಿ ಭೀಮನೆನಿಸಿ ಪಾಂಡು
ಭೂಪನರಸಿ ಕುಂತಿದೇವಿಯೊಳುದಿಸಿ
ಶ್ರೀಪತಿಗರ್ಥಿಯ ಸಲಿಸಿ ನೃಪಾ-
ನೃಪರೆಲ್ಲರ ಕೊಂದ ಮಹಿಮನ್ನ ಭಜಿಸಿ ।೨।

ಕಲಿಯುಗದಲಿ ಯತಿಯಾಗಿ ಈ
ಇಳೆಯ ದುಶ್ಯಾಸ್ತ್ರವ ಜರಿದ ವಿರಾಗಿ
ಕುಲಗುರು ಶ್ರೀ ಮಧ್ವಯೋಗಿ ನಮ್ಮ
ಚಲುವ ಹಯವದನನ ಭಂಟನೆಂದು ಬಾಗಿ ।೩।

ರಾಗ – ನಾಟಿ : ತಾಳ – ಮಿಶ್ರ ಛಾಪು ತಾಳ

ಏನ ಬಂಣ್ಣಿಪೆನಮ್ಮ ।ಪ।
ಬಂಣಿಪೆ ನಮ್ಮಯ್ಯ ಗುರುರಾಯರ ।ಅ ಪ।

ಮಧ್ವಸರೋವರ ತೀರದ ಮುದ್ದುಕೃಷ್ಣನ ಪ್ರ-
ಸಿದ್ಧಿಯಿಂದ ಪೂಜೆಮಾಡಿ ಗೆದ್ದ ಬಲವಂತ ರಾಯರ ।೧।

ಭವಬಂಧ ಮಾಯಿಗಳ ಕಾಲಲೊದ್ದು ಮೂಲಿಲ್ಹಾಕಿ
ಮಧ್ವಶಾಸ್ತ್ರವೆಲ್ಲ ಪ್ರಸಿದ್ಧ ಮಾಡಿದ ಯತಿರಾಯರ ।೨।

ಸಿರಿ ಹಯವದನನ ಚರಣಕಮಲವನ್ನು
ನಿರುತವಾಗಿ ಸೇವಿಸುವ ಅಚ್ಛಿನ್ನ ನಿಜದಾಸರ ।೩।

ರಾಗ – ನಾಟಿ : ತಾಳ – ಆದಿ ತಾಳ

ಗಜಮುಖ ವಂದಿಸುವೆ ಕರುಣಿಸಿ ಕಾಯೊ ।ಪ।

ಗಜಮುಖ ವಂದಿಪೆ ಗಜಗೌರಿಯ ಪುತ್ರ

ಅಜನ ಪಿತನ ಮೊಮ್ಮಗನ ಮೋಹದ ಬಾಲ ।ಅ ಪ।

ನೀಲಕಂಠನ ಸುತ ಬಾಲ ಗಣೇಶನೆ
ಬಾರಿ ಬಾರಿಗೆ ನಿನ್ನ ಭಜನೆ ಮಾಡುವೆನಯ್ಯ ।೧।

ಪರುವತನ ಪುತ್ರಿ ಪಾರ್ವತಿಯ ಕುಮಾರ
ಗರುವಿಯಾ ಚಂದ್ರಗೆ ಸ್ಥಿರಶಾಪ ಕೊಟ್ಟನೆ ।೨।

ಹರಿಹರರು ನಿನ್ನ ಚರಣ ಪೂಜೆಯ ಮಾಡಿ
ದುರುಳ ಕಂಟಕರನು ತರಿದು ಬಿಸುಡಿದರಯ್ಯ ।೩।

ಮತಿಗೆಟ್ಟ ರಾವಣ ಪೂಜಿಸದೆ ಸೀತಾ
ಪತಿ ಕರದಿಂದಲಿ ಹತವಾಗಿ ಪೋದನು ।೪।

ವಾರಿಜನಾಭ ಶ್ರೀ ಹಯವದನನ ಪದ
ಸೇರುವ ಮಾರ್ಗದ ದಾರಿಯ ತೋರಿಸೊ ।೫।

ರಾ ಗ – ಮ ಧ್ಯ ಮಾ ವ ತಿ : ತಾ ಳ – ಅ ಟ ತಾ ಳ

ಧವಳಗಂಗೆಯ ಗಂಗಾಧರಮಹಲಿಂಗ ಮಾ–
ಧವನ ತೋರಿಸಯ್ಯ ಗುರುಕುಲೋತ್ತುಂಗ ।ಪ।

ಅರ್ಚಿಸಿದವರಿಗಭೀಷ್ಟವ ಕೊಡುವ
ಹೆಚ್ಚಿದ ಅಘಗಳ ಬೇಗನೆ ತರಿವ
ದುಶ್ಚರಿತರನೆಲ್ಲ ದೂರದಲ್ಲಿಡುವ ನ–
ಮ್ಮಚ್ಯುತಗಲ್ಲದ ಅಸುರರ ಬಡಿವ ।೧।

ಮಾರನ ಗೆದ್ದ ಮನೋಹರ ಮೂರ್ತಿ
ಸಾರ ಸಜ್ಜನರಿಗೆ ಸುರ ಚಕ್ರವರ್ತಿ

ಧಾರಿಣಿಯೊಳಗೆ ತುಂಬಿದೆ ನಿನ್ನ ಕೀರ್ತಿ ಮು-
ರಾರಿಯ ತೋರಿಸಯ್ಯ ನಿನಗೆ ಶರಣಾರ್ಥಿ ।೨।

ಚೆನ್ನಪ್ರಸನ್ನ ಶ್ರೀ ಹಯವದನನ್ನ
ಅನುದಿನ ನೆನೆವಂತೆ ಮಾಡೊ ನೀ ಎನ್ನ
ಅನ್ಯನರಿಯೆನೊ ಗುರುವೆಂಬೆ ನಿನ್ನ
ಇನ್ನಾದರು ಹರಿಯ ತೋರೊ ಮುಕ್ಕಣ್ಣ ।೩।

ರಾಗ – ಆರಭಿ : ತಾಳ – ಅರೆಝಂಪೆ ತಾಳ

ವಾಣಿ ಪರಮಕಲ್ಯಾಣಿ ನಮೋ ನಮೋ ಅಜನ
ರಾಣಿ ಪಂಕಜಪಾಣಿ ।ಪ।

ಭಳಿರೆ ಭಳಿರೆ ಅಂಬೆ ಭಕ್ತಜನ ಸುಖದಂಬೆ
ಸುಳಿದಾಡು ಶುಭನಿತಂಬೆ ಅಮ್ಮ ನಿಮ್ಮ
ಹೊಳೆಹೊಳೆವ ಮುಖ ಮುಕುರ ಬಿಂಬೆ
ಇಳೆಯೊಳಗೆ ಸರಿಗಾಣೆ ಶಾರದಾಂಬೆ ಪುತ್ಥಳಿ ಬೊಂಬೆ ।೧।

ಶರಣು ಶರಣೆಲೆ ದೇವಿ ಸ್ಮರಣಮಾತ್ರದಿ ಕಾಯ್ವಿ
ಚರಣದಂದುಗೆಯ ಠೀವಿ ನಳನಳಿಸುವಾ
ಭರಣಗಳನಿಟ್ಟು ಸುಖವೀವಿ
ಧರೆಯೊಳಗೆ ಹರಿಣಾಕ್ಷಿ ನೀ ಸಲಹೆ ವಾಗ್ದೇವಿ ।೨।

ಜಯ ಜಯತು ಜಗನ್ಮಾತೆ ಜಗದೊಳಗೆ ಪ್ರಖ್ಯಾತೆ
ದಯಮಾಡು ಧವಳಗೀತೆ ಸತತ ಶ್ರೀ
ಹಯವದನಪದಕೆ ಪ್ರೀತೆ ಇಳೆಯೊಳಗೆ
ನಯದಿ ಗೆಲಿಸೆನ್ನ ಮಾತೆ ವಿಧಿಕಾಂತೆ ।೩।

ರಾ ಗ – ನಾ ಟಿ  :  ತಾ ಳ – ಆ ದಿ ತಾ ಳ

ಎಣೆಯಾರೊ ನಿನಗೆ ಹನುಮಂತರಾಯ । ಪ ।

ಎಣೆಯಾರೊ ನಿನಗೆ ತ್ರಿಭುವನದೊಳಗೆಲ್ಲ
ಪ್ರಣತಜನ ಮಂದಾರ ಪವನ ಸುಕುಮಾರ । ಅ ಪ ।

ಅಡಿಗಡಿಗೆ ರಾಮಪದಾಂಬುಜಕೆ ವಂದಿಸುತ
ನಡೆನಡೆದು ಮುದ್ರಿಕೆಯ ಪಡೆದು ಮುದದಿ
ದಡದಡನೆ ಅಂಬುಧಿಯ ದಾಟಿ ಸೀತೆಗೆ ಗುರುತ
ಕೊಡುಕೊಡುತ ಕುಸ್ತುರಿಸಿದಂಥ ಹನುಮಂತ ।@ ।

ಗರಗರನೆ ಪಲ್ಗಡಿದು ಕಲುಷದೈತ್ಯರನೆಲ್ಲ
ಚರಚರನೆ ಸೀಳಿ ಸಂಭ್ರಮದಿಂದ
ಬಿರಬಿರನೆ ಕಣ್ಬಿಡುತ ಬಿಂಕದಲಿ ಲಂಕೆಯನು
ಸುರಸುರನೆ ಬಾಲದಲಿ ಸುಟ್ಟ ರಣದಿಟ್ಟ । ೨ ।
ಫಳಫಳನೆ ಆರ್ಭಟದಿಂದ ರಾವಣನ
ನಳನಳನೆ ಬೆಳೆದ ನಂದನವ ಕಿತ್ತು
ಖಳಖಳನೆ ನಗುತ ದಶಕಂಧರನ ಗುದ್ದಿ ಬಂದೆ
ಭಳಿಭಳಿರೆ ಹಯವದನದಾಸ ನಿಸ್ಸೀಮ । ೩ ।

ರಾ ಗ – ಕಾ ನ ಡ  :  ತಾ ಳ – ಆ ದಿ ತಾ ಳ

ಬಾರೊ ಮುರಾರಿ ಬಾಲಕ ಶೌರಿ । ಪ ।@

ಸಾರ ವಿಚಾರಿ ಸಂತೋಷಕಾರಿ ।@ ಪ ।

ಆಟ ಸಾಕೇಳೊ ಮೈಯೆಲ್ಲ ಧೂಳೊ
ಊಟ ಮಾಡೇಳೊ ಕೃಷ್ಣ ಕೃಪಾಳೊ । ೧ ।

ಅರುಣಾಬ್ಜಚರಣ ಮಂಜುಳಾಭರಣ
ಪರಮ ವಿತರಣ ಪನ್ನಂಗಶಯನ ।೨।

ಮನೆಗೆದ್ದು ಬಾರೊ ಕೊನೆಗೈಯ್ಯ ತೋರೊ
ಚಿನುಮಯ ಬಾರೊ ನಗೆಮುಖ ತೋರೊ ।೩।

ವೆಂಕಟರಮಣ ಸಂಕಟ ಹರಣ
ಕಿಂಕರಾಮರಗಣ ವಂದಿತಚರಣ ।೪।

ಅರವಿಂದನಯನ ಶರದೇಂದುವದನ
ವರ ಯದುಸದನ ಸಿರಿ ಹಯವದನ ।೫।

ರಾ ಗ – ಕ ಲ್ಯಾ ಣಿ : ತಾ ಳ – ರೂ ಪ ಕ ತಾ ಳ

ಕುದುರೆ ಬಂದಿದೆ ಚೆಲುವ
ಕುದುರೆ ಬಂದಿದೆ ।ಪ।

ಕುದುರೆ ಬಂದಿದೆ ವಾದಿರಾಜಗೆ
ಮುದದಿ ಜ್ಞಾನ ಭಕುತಿ ಕೊಡುವ ।ಅ ಪ।

ಹಿಂಗಾಲಿಲಸುರರ ಒದೆವ ಕುದುರೆ
ಮುಂಗಾಲು ಕೆದರಿ ಬಾಲವ ಬೀಸಿ
ತಗ್ಗಿಸಿ ತಲೆಯ ಅಡಿಗಡಿಗೆ
ಜಿಗಿದು ಹಾರಿ ಹುಂಕರಿಸುವ ।೧।

ಗರುವಿ ಮಹಲಕ್ಷ್ಮಿ ತನ್ನ
ವರನೆಂದು ಒಲಿದು ಬರುವ
ಉರದಿ ಶ್ರೀವತ್ಸ ಕೌಸ್ತುಭ
ಧರಿಸಿ ತಾಂ ಮೆರೆಯುವಂಥ ।೨।

ಹಲ್ಲಣವಿಲ್ಲದೆ ನಿಲ್ಲದು ಕುದುರೆ
ಒಲ್ಲದು ಕಡಿವಾಣ ಕುದುರೆ
ಬೆಲ್ಲಕಡಲೆ ಮೆಲ್ಲುವ ಕುದುರೆ
ಚೆಲುವ ಹಯವದನನೆಂಬೊ ಕುದುರೆ ।೩।

ರಾಗ – ಭೀಂಪಲಾಸ್ : ತಾಳ – ತ್ರಿಪುಟತಾಳ

ಕುಣಿದಾಡೊ ರಂಗ ನಲಿದಾಡೊ ।ಪ।

ಕುಣಿದಾಡೊ ಕುಂದಣದ ಸರಳೆ
ನಲಿದಾಡೊ ಮಾಣಿಕದ ಹರಳೆ ।ಅ ಪ।

ಪತಿಶಾಪದಿ ಶಿಲೆಯಾದ ಗೌತಮ
ಸತಿಯ ಮೆಟ್ಟಿ ಪೆಣ್ಣ ಮಾಡಿ
ಅತಿದಿವ್ಯ ಶ್ರೀಚರಣಾರವಿಂದ
ಗತಿಯಿಂದಲಿ ಧಿಂಧಿಮಿಕೆನ್ನುತ ।೧।

ಗಕ್ಕಸದಿ ಶಕಟಾಸುರನ
ಸೊಕ್ಕ ಮುರಿದು ಬಂಡಿಯನೊದೆದು
ಚೊಕ್ಕ ಶ್ರೀಚರಣಾರವಿಂದ
ಧಿಕ್ಕಿಟ ಧಿಮಿಕಿಟ ಝುಂಕಿಟವೆನ್ನುತ ।೨।

ಬಲಿಯ ಮೆಟ್ಟಿ ಕಾಳಿಂಗನ। ಹೆಡೆಯ
ತುಳಿದು ನಾಟ್ಯವನಾಡಿ
ಚೆಲುವ ಶ್ರೀಹಯವದನ ನಿಮ್ಮ
ಘಲಿಘಲಿ ಗೆಜ್ಜೆ ಘಿಲುಘಿಲುಕೆನ್ನುತ ।೩।

ರಾ ಗ – ಅ ಠಾ ಣ : ತಾ ಳ – ಮಿ ಶ್ರ ಝಂ ಪೆ ತಾ ಳ

ಎಂಥಾ ಪಾವನ ಪಾದವೊ ಕೃಷ್ಣಯ್ಯ ಇ–
ನ್ನೆಂಥಾ ಚೆಲುವ ಪಾದವೊ ।ಪ।

ಎಂಥಾ ಪಾವನ ಪಾದ ಇಂತು ಜಗದಿ ಕೇಳು
ಪಂಥದೊಳಿದ್ದ ಕುರುಪತಿಯ ಉರುಳಿಸಿದ ।ಅ ಪ।

ಹಲವು ಕಾಲಗಳಿಂದಲಿ ಮಾರ್ಗದಿ
ಶಿಲೆ ಶಾಪ ಪಡೆದಿರಲು
ಒಲಿದು ರಜದಿ ಪಾವನಗೈದು ಕರುಣದಿ
ಶಿಲೆಯ ಬಾಲೆಯ ಮಾಡಿ ಸಲಹಿದ ಹರಿಯ ।೧।

ಬಲಿಯ ದಾನವ ಬೇಡಿ ತ್ರೈಲೋಕ್ಯವ–
ನಳೆದು ಏಕಾಂಘ್ರಿಯಲಿ
ಬೆಳೆದು ಭೇದಿಸಲಾಗ ನಳಿನಜಾಂಡವ ಸೋಕೆ
ಚೆಲುವ ಗಂಗೆಯ ಪೆತ್ತ ಜಲಜಾಸನಾರ್ಚಿತ ।೨।

ಚೆಂಡು ತರುವ ನೆವದಿ ಕಾಳಿಂಗನು–
ದ್ದಂಡ ಮಡುವ ಧುಮುಕಿ
ಚೆಂಡ ಕಾಳಿಂಗನ ಮಂಡೆಯೊಳು ಪಾದ
ಪುಂಡರೀಕವನಿಟ್ಟು ತಾಂಡವನಾಡಿದ ।೩।

ಸಂತತ ಸೌಖ್ಯವೀವ ಕಾವೇರಿಯ
ಅಂತರಂಗದಿ ನೆಲೆಸಿ
ಸಂತೋಷದಿಂದ ಅನಂತನ ಮ್ಯಾಲೆ ನಿ–
ಶ್ಚಿಂತೆಯೊಳು ಲಕುಮಿ ಭೂಕಾಂತೇರ ಸೇವಿಪ ।೪।

ಒಲಿದು ಗಯಾಸುರನ ಶಿರದೊಳಿಟ್ಟು
ಹಲವು ಭಕ್ತರ ಪೊರೆದೆ
ನೆಲೆಸಿ ಉಡುಪಿಲಿ ಎನ್ನ ಹೃದಯಕಮಲದಲ್ಲಿ
ತೊಲಗದೆ ಇರುತಿಪ್ಪ ಸುಲಭ ಹಯವದನ ।೫।

ಉ ಗಾ ಭೋ ಗ : ರಾ ಗ – ಕಾ ನ ಡ

ನಿನ್ನ ಧ್ಯಾನದ ಶಕ್ತಿಯ ಕೊಡೊ
ಅನ್ಯರಲಿ ವಿರಕ್ತಿಯ ಕೊಡೊ
ನಿನ್ನ ನೋಡುವ ಯುಕ್ತಿಯ ಕೊಡೊ
ನಿನ್ನ ಪಾಡುವ ಭಕ್ತಿಯ ಕೊಡೊ ನಿ–
ನ್ನುತ್ತೆ ಬರುವ ಸಂಪತ್ತಿಯ ಕೊಡೊ
ಚಿತ್ತದಿ ತತ್ವದ ಕೃತ್ಯವ ತೋರೊ
ಮತ್ತೆ ತುದಿಯಲಿ ಎನಗೆ ಮುಕ್ತಿಯ ಕೊಡೊ
ಅತ್ತತ್ತ ಮಾಡೊ ಭವಕತ್ತಲೆಯೆನಗೆ
ಮುತ್ತಿದೆ ಹಯವದನ

ಉ ಗಾ ಭೋ ಗ : ರಾ ಗ – ಬೇ ಹಾ ಗ್

ಅನ್ನದಾಸೆಗೆ ಪರರ ಮನೆಯ ಬಾಗಿಲಕಾಯ್ದು
ಅನೇಕ ಬಗೆಯಿಂದ ನೊಂದೆನೊ ಹರಿಯೆ
ಅನ್ಯತ್ರಪೊರಮಟ್ಟು ಪೋಗಲೀಸರು ಅವರು
ಮನ್ನಿಸಿ ಕೃಪೆಯಿಂದ ಕೂಡಿಕೊಂಡಿಹರೊ
ಅನಾಥಬಂಧು ಶ್ರೀಹಯವದನ ನಿನ್ನ
ಮನೆಯ ಕುನ್ನಿಗೆಂಜಲನಿಟ್ಟಂತೆ ಎನ್ನ ರಕ್ಷಿಸೊ

ರಾ ಗ – ಶ ಂ ಕ ರಾ ಭ ರ ಣ : ತಾ ಳ – ಏ ಕ ತಾ ಳ

ಕಂಡೆ ಕಂಡೆ ಕೃಷ್ಣ ನಿನ್ನಯ ದಿವ್ಯ ಮಂಗಳ ಮೂರ್ತಿಯ
ಕಂಡು ಬದುಕಿದೆ ಇಂದು ನಾನು ಕರುಣಿಸೊ ಎನ್ನೊಡೆಯನೆ । ಪ ।

ಉಟ್ಟ ದಟ್ಟಿಯು ಪಿಡಿದ ವಂಕಿಯು
ತೊಟ್ಟ ಕೌಸ್ತುಭ ಭೂಷಣ
ಮೆಟ್ಟಿದ ನವರತ್ನದ್ಪಾವಿಗೆ ಇಟ್ಟ ಕಸ್ತುರಿ ತಿಲಕವ । ೧ ।

ಮಂದಹಾಸವು ದಂತಪಂಜ್ತಿಯು
ಉಂದದ ಕಡೆಗಣ್ಣ ನೋಟವು
ಅಂದವಾದ ಕುರುಳುಗೂದಲು
ಮುದ್ದು ಸುರಿವೊ ಮುಖವನಾ ।೨।

ಮೊಲ್ಲೆ ಮಲ್ಲಿಗೆ ದಂಡೆ ಕೊರಳಲಿ
ಚೆಲ್ವ ಕಂಕಣ ಕೈಯಲಿ
ಗೊಲ್ಲ ಸತಿಯರ ಕುಚಗಳಲ್ಲಿ
ಅಲ್ಲೆಡೆ ಮಾಡಿ ನಗುವನ ।೩।

ಸುರರು ಪುಷ್ಪದ ವೃಷ್ಟಿ ಕರೆಯಲು ಅ-
ಸುರರೆಲ್ಲರು ಓಡಲು
ಕ್ರೂರ ಕಾಳಿಯ ಫಣಗಳಲ್ಲಿ
ಧೀರ ಕುಣಿಕುಣಿದಾಡಿದ ।೪।

ಇನ್ನು ಎನ್ನ ಬಂಧ ತೀರಿತು
ಇನ್ನು ಕ್ಲೇಶವು ಹೋಯಿತು
ಅನ್ಯ ದೈವವ ಭಜಿಸಲ್ಯಾತಕೆ
ಮನ್ನಿಸೊ ಹಯವದನನೆ ।೫।

ರಾ ಗ – ಭೀ ೦ ಪ ಲಾ ಸ್ : ತಾ ಳ – ಛಾ ಪು ತಾ ಳ

ನಲಿವ । ಬೆಣ್ಣೆಯನು ಮೆಲುವ । ಕೃಷ್ಣ ನಮ-
ಗೊಲಿವ । ಖಳರನ್ನ ಕೊಲುವ ।ಪ।

ನಗವ । ಕರದಿಂದ ನೆಗವ । ಅದರೊಳಗೆ
ಪೋಗುವ । ನರರ ಕಂಡು ನಗುವ ।೧।

ಕಡೆವ । ಕೋಲನ್ನು ಪಿಡಿವ । ಭೂಷಣವ
ತೊಡುವ । ಪಟ್ಟೆಗಳನುಡುವ ।೨।

ಬಡವ । ರಭೀಷ್ಟಗಳ ಕೊಡುವ । ದುರಿತಗಳ
ಜಡಿವ । ದೈತ್ಯರನು ಬಡಿವ । ೩ ।

ಶರಣ । ನಾಯಕನ ಚರಣ । ದ್ವಯಕೆ
ಪುರಹರಣ । ಮಸ್ತಕಾಭರಣ । ೪ ।

ಶರಣ । ಜನರ ಹಿತಕರಣ । ಹಯವದನ
ಸ್ಮರಣ । ಭವಕೆ ಸಂಹರಣ । ೫ ।

ರಾ ಗ – ಭೂ ಪಾ ಳಿ : ತಾ ಳ – ಝಂ ಪೆ ತಾ ಳ

ಬಾಗಿಲಲಿ ಬಿದ್ದಿಹ ಭಜಕನು ನಾನು
ಗೋಪಾಲ ಭೂಪಾಲ ಕಾಯಯ್ಯ ನೀನು । ಪ ।

ಯೋಗದ ಪಥಗಳನು ಏನೊಂದು ಅರಿಯೆನು
ನೀ ಗತಿಯೆಂದು ಬಂದು ಕೂಗುವೆನು ಹರಿಯೆ । ೧ ।

ಭೋಗವನು ಬಯಸುವೆ ಬಗೆಬಗೆಯಲಿ ರತಿಯ
ರೋಗ ಬಲವಾಯಿತು ತಿದ್ದೆನ್ನ ಮತಿಯ । ೨ ।

ಆಗಮ ಸಿದ್ಧ ಸುಗುಣಪೂರ್ಣ ಶ್ರೀಲೋಲ
ಬೇಗ ಸಲಹೊ ಮಮ ಸ್ವಾಮಿ ಹಯವದನ । ೩ ।

ಉ ಗಾ ಭೋ ಗ : ರಾ ಗ – ಆ ರ ಭಿ

ನಿನ್ನನೇ ನಂಬಿದೆ ಕೃಷ್ಣ ಅನ್ಯರೊಬ್ಬರ ಕಾಣೆ
ಪನ್ನಂಗಶಯನ ಶ್ರೀವತ್ಸ ಬಾರೊ
ಇರಳು ಹಗಲು ನಿನ್ನ ಚರಣಕ್ಕೆ ಮೊರೆಹೊಕ್ಕೆ
ಸರಿಯಾರು ಈರೇಳು ಭುವನದೊಳು ಹಯವದನ

ರಾ ಗ – ನ ವ ರೋ ಜು : ತಾ ಳ – ಛಾ ಪು ತಾ ಳ

ಜೋಜೋ ಜೋಜೋ ಜೋ ಮುಖ್ಯಪ್ರಾಣ
ಜೋಜೋ ಮಲೆವರ ಗಂಟಲಗಾಣ ।ಪ।

ಜೋಜೋ ರಾಕ್ಷಸ ಶಿಕ್ಷ ಕಲ್ಯಾಣ
ಜೋಜೋ ಸಕಲ ವಿದ್ಯಾ ಪ್ರವೀಣ ಜೋ ಜೋ ।ಅ ಪ।

ಆ ಜಗದಲಿ ನೀ ಬಾಲ ಬ್ರಹ್ಮಚಾರಿ
ಸೋಜಿಗದಲಿ ಕಪಿ ರಾಜ್ಯವನಾಳಿ
ತೇಜಮುತ್ತಿನ ಕವಚಕುಂಡಲಧಾರಿ
ಪೂಜಿಪರ ಪಾಲಿಪೆ ಸುಜನರುಪಕಾರಿ ।೧।

ಭೂಮಿ ಭಾರವನಿಳಿಸಿದ ಭೀಮ
ಕಾಮಿ ಕೀಚಕನ ಕುಟ್ಟಿ ರಣಧಾಮ
ಭಾಮಿನಿ ದ್ರೌಪದಿ ಕಷ್ಟ ನಿರ್ಧೂಮ
ಕಾಮಿತಾರ್ಥವನೀವ ಕಲ್ಪತರು ಭೀಮ ।೨।

ಸೌಂದರ್ಯರೂಪದ ಶ್ರೀಮದಾನಂದ
ತಂದೆ ಹಯವದನನ ಮೋಹದಕಂದ
ಬಂದು ಉಡುಪಿಯಲಿ ನೆಲೆಯಾಗಿ ನಿಂದ
ವಂದಿಸುವೆ ನಿದ್ರೆಗೈ ಹರಿಧ್ಯಾನದಿಂದ ।೩।